ಯಾರಾದರೂ ಕೈಯಲ್ಲಿ ಏನಾದಾರೂ ವಸ್ತುವನ್ನೋ ಇಲ್ಲಾ ಬ್ಯಾಗನ್ನೋ ತೆಗೆದುಕೊಂಡು ಹೋಗಿದ್ದು ನೋಡಿದ್ದಾರಾ ಅಂತ ವಿಚಾರಿಸಿ."

ಸುರೇಶ್ ಆಶ್ಚರ್ಯದಿಂದ ನೋಡಿದ.

"ಚೇತನ್‌ಕುಮಾರ್ ಮೊಬೈಲ್ ಇಲ್ಲಿಯೇ ಇದೆ. ಆದರೆ ಅವರ ಲ್ಯಾಪ್‌ಟಾಪ್ ಕಾಣೆಯಾಗಿದೆ. ಟೇಬಲ್ ಮೇಲೆ ಸೂಕ್ಷ್ಮವಾಗಿ ಗಮನಿಸಿದರೆ, ಅಷ್ಟು ಭಾಗದಲ್ಲಿ ಮಾತ್ರ ದೂಳು ಕಡಿಮೆ ಇದೆ. ಅಂದರೆ ಕೊಲೆಗಾರ ಆ ಲ್ಯಾಪ್‌ಟಾಪ್ ತೆಗೆದುಕೊಂಡು ಹೋಗಿದ್ದಾನೆ. ಅದನ್ನು ಹಾಗೆಯೇ ತೆಗೆದುಕೊಂಡು ಹೋಗಿರಬಹುದು ಅಥವಾ ಬ್ಯಾಗಿನಲ್ಲಿ ಹಾಕಿಕೊಂಡು ಹೋಗಿರಬಹುದು."

"ಬ್ಲಾಕ್‌ಮೇಲ್ ಕೇಸ್ ಇರಬಹುದಾ? ಲ್ಯಾಪ್‌ಟಾಪ್‌ನಲ್ಲಿ ಏನೋ ಇಂಪಾರ್ಟೆಂಟ್ ವಿಚಾರ ಇರಬೇಕು." ಸುರೇಶ್ ತನ್ನ ಅನುಮಾನ ವ್ಯಕ್ತಪಡಿಸಿದ.

"ಸರ್... ಇಲ್ಲಿ ಇನ್ನೊಂದು ರಕ್ತದ ಕಲೆ ಸಿಕ್ಕಿದೆ. ಅದನ್ನು ಒರೆಸಲು ಪ್ರಯತ್ನಿಸಿದ್ದಾರೆ. ಆತುರದಲ್ಲಿ ಆಗಿಲ್ಲ ಅನಿಸುತ್ತದೆ. ಸ್ಯಾಂಪಲ್ ಕಲೆಕ್ಟ್ ಮಾಡಿಕೊಂಡಿದ್ದೇನೆ."

ಫೋರೆನ್ಸಿಕ್‌ನವನು ಕೂಗಿದ.

"ವೆರಿಗುಡ್, ಆ ರಕ್ತದ ಸ್ಯಾಂಪಲ್ ಅನ್ನು ಡಿಎನ್‌ಎ ಪ್ರೊಫೈಲಿಂಗ್‌ಗೆ ಕಳುಹಿಸಿ. ನಮಗೆ ಯಾರ್‍ಯಾರ ಮೇಲೆ ಸಂಶಯ ಬರುತ್ತದೆಯೋ ಅವರ ಡಿಎನ್‌ಎ ಜೊತೆ ಮ್ಯಾಚ್ ಮಾಡಿದರೆ, ಅಪರಾಧಿ ಸಿಕ್ಕಿಬಿಡುತ್ತಾನೆ."

ನಾಗೇಶನ ಧ್ವನಿಯಲ್ಲಿ ಉತ್ಸಾಹ ತುಂಬಿತು.

"ಬಹುಶಃ ನಮಗೆ ಮೊದಲ ಸಸ್ಪೆಕ್ಟ್ ಸಿಕ್ಕಿಬಿಟ್ಟ ಸರ್... ಸಾರಿ ಸಿಕ್ಕಿ ಬಿಟ್ಟಳು ಸರ್." ಸುರೇಶ್ ತನ್ನ ಕೈಯಲ್ಲಿದ್ದ ಚೇತನ್‌ಕುಮಾರ್‌ನ ಮೊಬೈಲ್‌ನಲ್ಲಿ ಒಂದು ವಾಟ್ಸ್‌ಆ್ಯಪ್ ಮೆಸೇಜ್ ತೋರಿಸುತ್ತಾ ನುಡಿದ.

'ಸಾಯಕಾಲ ಐದು ಗಂಟೆಗೆ ಸಿಗುತ್ತೇನೆ' ಎನ್ನುವ ಮೆಸೇಜ್... ಅದಕ್ಕೆ ಉತ್ತರವಾಗಿ 'ಕಾಯುತ್ತಿರುತ್ತೇನೆ' ಎನ್ನುವ ಉತ್ತರದೊಂದಿಗೆ ಎರಡು ಹಾರ್ಟ್ ಶೇಪಿನ ಇಮೋಜಿ ಕಳುಹಿಸಿದ್ದ ಚೇತನ್. ಕಳುಹಿಸಿದವರ ಹೆಸರು 'ನವಮಿ' ಎಂದು ಸೇವ್ ಆಗಿತ್ತು.

"ಈ ನವಮಿ ಯಾರೆಂದು ಹುಡುಕಿ, ನಾಳೆ ಅವರನ್ನು ನೋಡೋಣ." ಎನ್ನುತ್ತಾ ನಾಗೇಶ್ ಕ್ರೈಂ ಸೀನ್‌ನಿಂದ ಹೊರಟ. ಆದರೆ ಅವನ ತಲೆಯಲ್ಲೊಂದು ಪ್ರಶ್ನೆ ಆಗಲೇ ಕೊರೆಯತೊಡಗಿತ್ತು.

'ಈ ನವಮಿಯೇ ಕೊಲೆ ಮಾಡಿದ್ದಾರೆ ಎಂದು ಭಾವಿಸಿದರೆ, ಲ್ಯಾಪ್‌ಟಾಪ್ ಕೊಂಡೊಯ್ದು, ಮೊಬೈಲ್‌ನಲ್ಲಿ ತನ್ನ ಮೆಸೇಜ್ ಇದೆ ಎಂದು ಅರಿವಿದ್ದರೂ ಅದನ್ನು ಇಲ್ಲಿಯೇ ಯಾಕೆ ಬಿಟ್ಟುಹೋದರು? ಅಥವಾ ಯಾರೋ ಬೇರೆಯವರು ಮಾಡಿ ನವಮಿಯ ಮೇಲೆ ಅನುಮಾನ ಬರುವಂತೆ ಮಾಡಲಿಕ್ಕೆ ಹೀಗೆ ಮಾಡಿದ್ದಾರಾ?'

★★★

"ಮಿಸ್ ನವಮಿ?"

ತನ್ನೆದುರಿಗೆ ಬಂದು ಕುಳಿತ ಮಹಿಳೆಯನ್ನು ನೋಡಿ ಕೇಳಿದ ನಾಗೇಶ್. ಚೇತನ್‌ಕುಮಾರ್ ಮೊಬೈಲ್‌ನಲ್ಲಿ ಸಿಕ್ಕಿದ್ದ ಮೆಸೇಜ್‌ನ ನಂಬರ್ ಟ್ರ್ಯಾಕ್ ಮಾಡಿ ನವಮಿಯ ಬಳಿ ಬಂದಿದ್ದ.

"ಮಿಸೆಸ್ ನವಮಿ..." ಗಂಭೀರವಾಗಿ ನುಡಿದಳು.

"ನಿಮಗೆ ಪ್ರೊಡ್ಯೂಸರ್ ಚೇತನ್‌ಕುಮಾರ್ ಗೊತ್ತಾ ?"

"ಮೊದಲು ಕುಳಿತುಕೊಳ್ಳಿ ಆಫೀಸರ್. ನೀವು ಇಲ್ಲಿಗೆ ಯಾತಕ್ಕೆ ಬಂದಿದ್ದೀರಿ ಅಂತ ನನಗೆ ಗೊತ್ತಿದೆ. ಸುತ್ತಿ ಬಳಸಿ ಮಾತು ಯಾಕೆ?"